ಕರ್ನಾಟಕವಿಧಾನಸಭೆ

<table>
<tr><td colspan="2">ಪ್ರಶ್ನೆಸಂಖ್ಯೆ</td><td>ಎಲ್.ಎ.ಕ್ಯೂ.1789</td></tr>
<tr><td colspan="2">ಸದಸ್ಯರಹೆಸರು</td><td>ಶ್ರೀ ಸುರೇಶ್ ಬಾಬು ಸಿ.ಬಿ (ಚಿಕ್ಕನಾಯಕನಹಳ್ಳಿ)</td></tr>
<tr><td colspan="2">ಉತ್ತರಿಸಬೇಕಾದದಿನಾಂಕ</td><td>24/07/2024</td></tr>
<tr><td colspan="2">ಉತ್ತರಿಸುವಸಚಿವರು</td><td>ಮಾನ್ಯ ಕೃಷಿ ಸಚಿವರು.</td></tr>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 2-3 ವರ್ಷಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಕೃಷಿ ಯಾಂತ್ರೀಕರಣ ಯೋಜನೆಯಡಿ ಯಂತ್ರಗಳನ್ನು ನೀಡದಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ; ಕೃಷಿ ಯಾಂತ್ರೀಕರಣ ಯೋಜನೆಯಡಿ ಯಂತ್ರಗಳನ್ನು ನೀಡದಿರಲು ಕಾರಣಗಳೇನು;</td><td>ಕಳೆದ 2-3 ವರ್ಷಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಕೃಷಿ ಯಾಂತ್ರೀಕರಣ ಯೋಜನೆಯಡಿ ಯಂತ್ರಗಳನ್ನು ನೀಡದಿರುವುದು ಸರ್ಕಾರ ಗಮನಕ್ಕೆ ಬಂದಿರುವುದಿಲ್ಲ.
ಕೃಷಿ ಇಲಾಖೆಯಲ್ಲಿ ಪ್ರತಿ ವರ್ಷವೂ ಲಭ್ಯವಿರುವ ಅನುದಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ವಿವಿಧ ಮಾದರಿಯ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಒದಗಿಸಲಾಗುತ್ತಿದೆ. 2021-22, 2022-23 ಮತ್ತು 2023-24 ನೇ ಸಾಲುಗಳಲ್ಲಿ ಕೃಷಿ ಯಾಂತ್ರೀಕರಣ ಯೋಜನೆಗಳಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಕೃಷಿ ಯಂತ್ರೋಪಕರಣಗಳನ್ನು ನೀಡಿದ ವಿವರಗಳನ್ನು ಈ ಕೆಳಗೆ ನೀಡಿದೆ.
<table>
<tr><th rowspan="2">ಕ್ರ. ಸಂ</th><th rowspan="2">ವರ್ಷ</th><th colspan="2">ಫಲಾನುಭವಿಗಳು / ಭೌತಿಕ (ಸಂಖ್ಯೆಗಳಲ್ಲಿ)</th></tr>
<tr><th>ಪ.ಜಾ.ಉ (422)</th><th>ಗಿ.ಜ.ಉ (423)</th></tr>
<tr><td>1</td><td>2021-22</td><td>24232</td><td>13164</td></tr>
<tr><td>2</td><td>2022-23</td><td>12280</td><td>9118</td></tr>
<tr><td>3</td><td>2023-24</td><td>24010</td><td>8684</td></tr>
</table></td></tr>
<tr><td>ಆ)</td><td>ಸದರಿ ಕೃಷಿ ಯಾಂತ್ರೀಕರಣ ಯೋಜನೆಯಡಿ ಫಲಾನುಭವಿಗಳಿಗೆ ಯಂತ್ರಗಳನ್ನು ಯಾವಾಗ ವಿತರಿಸಲಾಗುವುದು?</td><td>ಕೃಷಿ ಯಾಂತ್ರೀಕರಣ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಕೃಷಿ ಯಂತ್ರೋಪಕರಣಗಳ ವಿತರಣೆಯು ಚಾಲ್ತಿಯಲ್ಲಿರುತ್ತದೆ.</td></tr>
</table>

ಕೃಷಿ ನಿರ್ದೇಶಕರು